ಬರುವಂತಹ ರಸ್ತೆಗಳನ್ನು ತೆಗೆದು ಗಮನದಲ್ಲಿಟ್ಟುಕೊಂಡು ಅಲ್ಲಿ ಕಾರ್ಖಾನೆಯವರು ಸೂಚಿಸಿರುವಂತಹ ರಸ್ತೆಗಳನ್ನು ತೆಗೆದುಕೊಂಡು ಅಭಿವೃದ್ಧಿಪಡಿಸುವ ಕೆಲಸವನ್ನು ಮಾಡಲಾಗಿದೆ. ಜೊತೆಗೆ 1997-98ನೇ ಸಾಲಿಗೆ ನಾವು ಹಣವನ್ನು ಒದಗಿಸಿಲ್ಲ.

ಶ್ರೀ ಯು.ಬಿ. ಬಣಕಾರ್ : ಮಾನ್ಯ ಮಂತ್ರಿಗಳು ಅಯವ್ಯಯದಲ್ಲಿ 1997-98ಕ್ಕೆ ಹಣವನ್ನು ನಿಗದಿ ಮಾಡಿದ್ದೀರೋ ಇಲ್ಲವೊ?

ಶ್ರೀ ಸಿ.ಎಂ. ಉದಾಸಿ : ನಾನು ಆಗಲೇ ಇಲ್ಲವೆಂದು ಹೇಳಿದ್ದೇನೆ.

ಶ್ರೀ ಯು.ಬಿ. ಬಣಕಾರ್ : ಕಳೆದ ವರ್ಷ ಹಣವನ್ನು ನಿಗದಿ ಮಾಡಲಿಲ್ಲ. ರೈತರು ಕಬ್ಬನ್ನು ಸಕ್ಕರೆ ಕಾರ್ಖಾನೆಗೆ ಒಯ್ಯಲು ತೊಂದರೆಯಾಯಿತು. ಈ ವರ್ಷವಾದರೂ ರಸ್ತೆ ಅಭಿವೃದ್ಧಿಪಡಿಸುವುದಕ್ಕೆ ಹಣವನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಸಿ.ಎಂ. ಉದಾಸಿ : ಸಕ್ಕರೆ ಕಾರ್ಖಾನೆ ವ್ಯಾಪ್ತಿಯಲ್ಲಿ ಬರುವಂತಹ ರಸ್ತೆಗಳ ಸುಧಾರಣೆಗೆ ಹಣವನ್ನು ಒದಗಿಸುವಂತಹ ಕಾರ್ಯಕ್ರಮವನ್ನು ರೂಪಿಸಲಾಗಿದೆ.

ತೀರ್ಥಹಳ್ಳಿ ತಾಲ್ಲೂಕಿನಲ್ಲಿ ನಿವೇಶನ ಮಂಜೂರಾತಿಗಾಗಿ ಅರಣ್ಯ ಇಲಾಖೆಯ ಒಪ್ಪಿಗೆ

371- ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತೀರ್ಥಹಳ್ಳಿ ತಾಲ್ಲೂಕಿನಲ್ಲಿ ನಿವೇಶನ ಮಂಜೂರಾತಿಗಾಗಿ ಅರಣ್ಯ ಇಲಾಖೆ ಒಪ್ಪಿಗೆ ಕೇಳಿ ಎಷ್ಟು ಅರ್ಜಿಗಳು ಬಂದಿವೆ? (ವಲಯವಾರು ವಿವರ ನೀಡುವುದು)?*

ಆ) *ಈ ಅರ್ಜಿಗಳು ಎಷ್ಟು ಸಮಯದಿಂದ ಇಲಾಖೆಯಲ್ಲಿ ಬಾಕಿ ಉಳಿದಿರುತ್ತದೆ?*

ಇ) *ಹಾಗಿದ್ದಲ್ಲಿ ಬಡವರಿಗೆ ನಿವೇಶನ ನೀಡುವಲ್ಲಿ ಅನಾದರಣೆಯನ್ನು ತೋರಿಸಿ ವಿಳಂಬ ಮಾಡುತ್ತಿರುವ ಅಧಿಕಾರಿಗಳ ಮೇಲೆ ಸರ್ಕಾರವು ಯಾವ ಶಿಸ್ತು ಕ್ರಮ ಕೈಗೊಳ್ಳಲಾಗುವುದು?*

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) :

ಅ) 424 ಅರ್ಜಿಗಳು.

ಕ್ರ.ಸಂ.	ವಲಯ	ಅರ್ಜಿಗಳ ಸಂಖ್ಯೆ
1)	ಆಗುಂಬೆ ವಲಯ	2
2)	ಮಂಡಗದ್ದೆ ವಲಯ	55
3)	ತೀರ್ಥಹಳ್ಳಿ ವಲಯ	367
4)	ರಿಪ್ಪನ್‌ಪೇಟೆ ವಲಯ	-
	ಒಟ್ಟು	**424**

ಅ) ಮೇಲ್ಕಂಡ ಅರ್ಜಿಗಳ ಪೈಕಿ ಅಭಿಪ್ರಾಯ ನೀಡಲು ಬಾಕಿ ಇರುವ ಅರ್ಜಿಗಳ ವಿವರ ಈ ಕೆಳಗಿನಂತಿವೆ.

1) ಆಗುಂಬೆ ವಲಯದಲ್ಲಿ ಸುಮಾರು 6 ತಿಂಗಳಿನಿಂದ 2 ಅರ್ಜಿ ಬಾಕಿ ಇದೆ.

2) ಮಂಡಗದ್ದೆ ವಲಯದಲ್ಲಿ 12 ತಿಂಗಳಿನಿಂದ 10 ಅರ್ಜಿಗಳು ಬಾಕಿ ಇದೆ.

3) ತೀರ್ಥಹಳ್ಳಿ ವಲಯದಲ್ಲಿ 5 ತಿಂಗಳಿನಿಂದ 12 ಅರ್ಜಿಗಳು ಬಾಕಿ ಇದೆ.

ಇ) ಮೇಲೆ ಕಾಣಿಸಿರುವ ಹೆಚ್ಚಿನ ಅರ್ಜಿಗಳು ಅರಣ್ಯ ಪ್ರದೇಶಕ್ಕೆ ಸಂಬಂಧಿಸಿದ್ದು ಅವುಗಳಲ್ಲಿ ಕೆಲವೊಂದು ಪ್ರದೇಶಗಳ ಜಂಟಿ ಸರ್ವೆ ಬಳಿಕ ನಿರ್ಧರಿಸಬೇಕಾದ ಪ್ರಕರಣಗಳೂ ಸೇರಿವೆ.

ಯಾವುದೇ ಅರಣ್ಯ ಭೂಮಿಯನ್ನು ಅರಣ್ಯೇತರ ಉದ್ದೇಶಗಳಿಗೆ ಉಪಯೋಗಿಸಬೇಕಾಗಿದ್ದಲ್ಲಿ 1980ರ ಅರಣ್ಯ (ಸಂರಕ್ಷಣೆ) ಕಾಯಿದೆ ಪ್ರಕಾರ ಕೇಂದ್ರ ಸರ್ಕಾರದ ಅನುಮತಿಯನ್ನು ಪಡೆಯಲೇ ಬೇಕಾಗುತ್ತದೆ. ಆದ್ದರಿಂದ, ಕಂದಾಯ ದಾಖಲೆಗಳಲ್ಲಿ ಅರಣ್ಯ ಎಂದು ನಮೂದಿಸಿದ ಪ್ರದೇಶಗಳನ್ನು ಅರಣ್ಯೇತರ ಉದ್ದೇಶಗಳಿಗಾಗಿ ಮಂಜೂರಾತಿ ನೀಡಬೇಕಾಗಿದ್ದಲ್ಲಿ 1980ರ ಅರಣ್ಯ (ಸಂರಕ್ಷಣಾ) ಕಾಯಿದೆಯ ಪ್ರಕಾರ ಕಂದಾಯ ಇಲಾಖೆಯವರು ಪ್ರಸ್ತಾವನೆಗಳನ್ನು ಸಲ್ಲಿಸಬಹುದಾಗಿರುತ್ತದೆ. ನಿಯಮಾನುಸಾರವಾಗಿ, ನಿವೇಶನಗಳನ್ನು ಬಡ ಜನರಿಗೆ ಮಂಜೂರು ಮಾಡುವಲ್ಲಿ ಯಾವುದೇ ನಿರ್ಲಕ್ಷತೆಯನ್ನು ಇಲಾಖೆಯು ತೋರಿಸುವುದಿಲ್ಲ.

ಅರಣ್ಯ (ಸಂರಕ್ಷಣೆ) ಕಾಯಿದೆ 1980ರ ನಿಯಮಾವಳಿಗಳ ಪ್ಯಾರಾ 4.5 (i) (ii)ರ ಪ್ರಕಾರ ಮನೆ ನಿವೇಶನಗಳಿಗಾಗಿ, ಅರಣ್ಯ ಭೂಮಿಯ ಮಂಜೂರಾತಿಗೆ ಅಸ್ಪದ ಇರುವುದಿಲ್ಲ. ಅರಣ್ಯ ಪ್ರದೇಶವನ್ನು ಯಾವುದೇ ಅರಣ್ಯೇತರ ಕೆಲಸಗಳಿಗೆ ಮಂಜೂರು ಮಾಡುವಲ್ಲಿ ನಿರ್ದಿಷ್ಟ ನಿಯಮಾವಳಿಗಳಿರುವುದರಿಂದ, ನಿವೇಶನ ನೀಡದಿರುವುದಕ್ಕೆ ಅರಣ್ಯ ಅಧಿಕಾರಿಗಳು ಕಾರಣರಾಗುವುದಿಲ್ಲ ಹಾಗೂ ಯಾವುದೇ ಶಿಸ್ತು ಕ್ರಮವನ್ನು ಅಧಿಕಾರಿಗಳ ಮೇಲೆ ತೆಗೆದುಕೊಳ್ಳುವ ಪ್ರಮೇಯ ಉದ್ಭವಿಸುವುದಿಲ್ಲ.

ಶ್ರೀ ಅರಗಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಬಡವರಿಗೆ ವಿತರಣೆ ಮಾಡತಕ್ಕ ನಿವೇಶನ ಮಲೆನಾಡು ತಾಲ್ಲೂಕುಗಳಲ್ಲಿ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನ ಒಪೀನಿಯನ್‌ಗೆ ಹೋಗುತ್ತದೆ. ಒಪೀನಿಯನ್‌ಗೆ ಹೋಗಿರತಕ್ಕ ಅರ್ಜಿಗಳು ವಾಪಸು ಬರುವುದಿಲ್ಲ. ಹಾಗಾಗಿ ನಾವು ಆಶ್ರಯ ಮತ್ತು ಬೇರೆ ಬೇರೆ ಯೋಜನೆಯಲ್ಲಿ ಸೈಟನ್ನು ವಿತರಣೆ ಮಾಡುವುದಕ್ಕೆ ತಡ ಉಂಟಾಗಿದೆ. ಫಾರೆಸ್ಟ್ ಇಲಾಖೆಯ ಅಧಿಕಾರಿಗಳಿಗೆ ಇದನ್ನು ಪದೇ ಪದೇ ಹೇಳಿದರೂ ಕೂಡ ನಮ್ಮ ಜೊತೆಗೆ ಸಹಕಾರ ನೀಡುತ್ತಿಲ್ಲ. ಅವರು ಕೊಟ್ಟಂತಹ ಉತ್ತರದಲ್ಲಿ ಆಗುಂಬೆ ವಲಯ ನನ್ನ ಕ್ಷೇತ್ರದಲ್ಲಿ ಎರಡು ಅರ್ಜಿಗಳು ಒಪೀನಿಯನ್‌ಗೆ ಹೋಗಿತ್ತು. ಎರಡು ಅರ್ಜಿ ಆರು ತಿಂಗಳಿನಿಂದ ಬಾಕಿಯಿದೆ. ವಲಯ ಅರಣ್ಯ ಅಧಿಕಾರಿಗಳ ಜೊತೆಯಲ್ಲಿ ಬಾಕಿಯಿದೆ. ಮಂಡಗದ್ದೆ ವಲಯಕ್ಕೆ 10 ಅರ್ಜಿಗಳು ಹೋಗಿದ್ದು ಅವು 12 ತಿಂಗಳಿನಿಂದ ಬಾಕಿಯಿದೆ. ಒಂದು ವರ್ಷದಿಂದ ಇದನ್ನು ಇತ್ಯರ್ಥ ಮಾಡಲಿಕ್ಕೆ ಆಗಲಿಲ್ಲ. ತೀರ್ಥಹಳ್ಳಿ ವಲಯದಲ್ಲಿ 12 ಅರ್ಜಿಗಳು 5 ತಿಂಗಳಿನಿಂದ ಪೆಂಡಿಂಗ್ ಇದೆ. ಇನ್ನು

ಒಂದೆರಡು ವಲಯಗಳು ಬರುತ್ತವೆ ಅವುಗಳ ಬಗ್ಗೆ ಇಲ್ಲಿ ಉತ್ತರ ಕೊಡಲಿಲ್ಲ. ಹೀಗೆ ಒಂದು ವರ್ಷ ಆರು ತಿಂಗಳು ಒಪೀನಿಯನ್ ಕೊಡುವುದಕ್ಕೆ ಬೇಕಾದರೆ ಸರ್ಕಾರ ಬಡವರಿಗೆ ಹಂಚತಕ್ಕ ನಿವೇಶನಗಳನ್ನು ವಿತರಣೆ ಮಾಡುವಂತಹ ಕಾರ್ಯಕ್ರಮ ಹೇಗೆ ಅನುಷ್ಠಾನ ಆಗುತ್ತದೆ? ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದೀರಾ ಎಂದು ಪ್ರಶ್ನೆ ಕೇಳಿದ್ದಕ್ಕೆ, ಯಾವುದೇ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವಂತಹ ಯಾವುದೇ ತೊಂದರೆ ಉದ್ಭವಿಸಿಲ್ಲವೆಂದು ಹೇಳುತ್ತಾರೆ. ಹಾಗಾಗಿ ನಿಮ್ಮ ಅಧಿಕಾರಿಗಳು ಒಪೀನಿಯನ್ ಕೊಡುವುದಕ್ಕೆ ಇಷ್ಟು ದಿನ ಗಡುವು ಪಡೆಯಬೇಕೆನ್ನುವುದು ಏನಾದರೂ ಇದೆಯೇ? ಹಾಗೆ ಇಲ್ಲದಿದ್ದರೆ ವರ್ಷಗಟ್ಟಲೆ ಈ ರೀತಿ ಡಿಲೇ ಮಾಡಿದರೆ ಸರ್ಕಾರದ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲಿಕ್ಕೆ ತೊಂದರೆಯಾಗುವುದಿಲ್ಲವೇ? ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಡಿ. ಮಂಜುನಾಥ್ : ಮಾನ್ಯ ಅಧ್ಯಕ್ಷರೆ, ಕಂದಾಯ ದಾಖಲೆಯಲ್ಲಿ ಅರಣ್ಯ ಎಂದು ಇದ್ದಿದ್ದರೆ ಕಂದಾಯ ಇಲಾಖೆಯವರು 1980ನೇ ಇಸವಿ ಅರಣ್ಯ ಸಂರಕ್ಷಣೆ ಕಾಯಿದೆ ಪ್ರಕಾರ ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕು. ಕೇಂದ್ರಸರ್ಕಾರದಿಂದ ಮಂಜೂರಾತಿ ಬಂದಮೇಲೆ ಮಾತ್ರ ಸೈಟ್‌ಗಳನ್ನು ಕೊಡುವುದಕ್ಕೆ ಒಪೀನಿಯನ್ ಕೊಡುತ್ತಾರೆ ಅದಕ್ಕೋಸ್ಕರ ತಡವಾಗಿದೆ. ಇದರಲ್ಲಿ ನಮ್ಮ ಇಲಾಖೆಯ ಅಧಿಕಾರಿಗಳ ನಿರ್ಲಕ್ಷ್ಯತೆ ಇಲ್ಲ. ಪ್ರಸ್ತಾವನೆಯನ್ನು ಕಳುಹಿಸುವುದನ್ನು ಅವರು ಕಳುಹಿಸಬೇಕು. ಕೇಂದ್ರಸರ್ಕಾರದ ಅನುಮತಿ ಇಲ್ಲದೆ ಕೊಡುವಹಾಗೆ ಇಲ್ಲ ಅದಕ್ಕೋಸ್ಕರ ತಡವಾಗಿದೆ. ಅದಕ್ಕೆ ಮಾನ್ಯ ಸದಸ್ಯರಿಗೆ ಒಂದು ಸಲಹೆ ಕೊಡುತ್ತೇನೆ. ಬಹುತೇಕ ಪಶ್ಚಿಮಘಟ್ಟ ಪ್ರದೇಶಗಳಲ್ಲಿ ಈ ತರಹ ಇದೆ. ನಾನು ಆ ಭಾಗದ ಎಲ್ಲಾ ಶಾಸಕರ ಒಂದು ಸಭೆಯನ್ನು ಕರೆದು ಒಂದು ಮೀಟಿಂಗ್ ಮಾಡಿ ಇದಕ್ಕೆ ಪರಿಹಾರ ಯಾವರೀತಿ ಮಾಡಬೇಕು ಎನ್ನುವುದನ್ನು ತಮಗೆ ತಿಳಿಸಿದ್ದೇನೆ. ಆ ರೀತಿ ಮಾಡುತ್ತೇನೆ.

ಶ್ರೀ ಅರಗಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಅರಣ್ಯ ಪ್ರದೇಶದಲ್ಲಿ ನಿವೇಶನ ಕೊಡಲಿಕ್ಕೆ ಬರುವುದಿಲ್ಲವೆನ್ನುವುದು ನಮಗೆ ಗೊತ್ತಿದೆ. ನಮ್ಮಲ್ಲಿ ಏನಾಗಿದೆ ಅಂದರೆ, ಮಲೆನಾಡಿನಲ್ಲಿ ಒಂದೇ ಸರ್ವೆ ನಂಬರಿನಲ್ಲಿ ಒಂದು ಭಾಗ ರೆವಿನ್ಯೂ ಇನ್ನೊಂದು ಭಾಗ ಫಾರೆಸ್ಟ್ ಭೂಮಿ ಇರುತ್ತದೆ. ಒಟ್ಟು 300ಎಕರೆ ವಿಸ್ತೀರ್ಣವಿದ್ದರೆ ಅದರಲ್ಲಿ 150ಎಕರೆ ಅರಣ್ಯ ಭೂಮಿ 50ಎಕರೆ ರೆವಿನ್ಯೂ ಭೂಮಿ ಇರುತ್ತದೆ. ನಾವು ಕೇಳುತ್ತಿರುವುದು ನಿವೇಶನ ಕೊಡಲಿಕ್ಕೆ ಇದು ಅರಣ್ಯಪ್ರದೇಶದಲ್ಲಿ ಬರುತ್ತದೆಯೇ ಇಲ್ಲವೇ ಎನ್ನುವ ಒಪೀನಿಯನ್ ಅಷ್ಟೆ. ಅರಣ್ಯದಲ್ಲಿ ಬರುತ್ತದೆ ಅಂದರೆ ಅದನ್ನು ಮಂಜೂರು ಮಾಡುವುದಕ್ಕೆ ಹಕ್ಕು ಇಲ್ಲ ಎಂದು ವಾಪಸ್ಸು ಬರೆದು ಹಾಕುತ್ತಾರೆ ಅಷ್ಟೆ. ನಾನು ಪದೇ ಪದೇ ಕೇಳುತ್ತಿದ್ದೇನೆ, ನಿವೇಶನ ಮತ್ತು ಬಗರು ಹುಕುಂ ಸಾಗುವಳಿಯದು ಇವೆರಡೂ ಇದೇ ಗೋಳು ಆಗುತ್ತಿದೆ. ಅದರ ಕಡೆಗೆ ಗಮನವೇ ಇಲ್ಲ. ಇದರ ಬಗ್ಗೆ ನಿರ್ಲಕ್ಷ್ಯ ಮಾಡುತ್ತಿದ್ದಾರೆ. ಅರ್ಜಿಯ ಜೊತೆ ಜನರು ಹೋದರೆ ಮಾತ್ರ, ಹಣ ಕೊಟ್ಟರೆ ಮಾತ್ರ ಇದು ಲಭ್ಯವಾಗುತ್ತದೆ. ಇಲ್ಲದಿದ್ದರೆ ಅದು ವಾಪಸ್ಸು ಬರುತ್ತದೆ. ಇಲ್ಲದಿದ್ದರೆ ಕಡತಗಳು ವರ್ಷಾನುಗಟ್ಟಲೆ ನಮ್ಮ ಅರಣ್ಯ ಅಧಿಕಾರಿಗಳ ಕಛೇರಿಯಲ್ಲಿ ಕೊಳೆಯುತ್ತಿರುತ್ತವೆ. ಅವರನ್ನು ಚುರುಕು ಮಾಡುವುದಕ್ಕೆ ಏನಾದರೂ ವ್ಯವಸ್ಥೆ ಇದೆಯೆ?

ಶ್ರೀ ಡಿ. ಮಂಜುನಾಥ್ : 424 ಕೇಸುಗಳು ಇಂತಹವು ಇವೆ. ಪ್ರಸ್ತಾವನೆಯನ್ನು ಕಳುಹಿಸಿ ಕೇಂದ್ರಸರ್ಕಾರದಿಂದ ಅನುಮತಿ ಬರುವವರೆಗೆ ನಾವೇನೂ ಮಾಡುವ ಹಾಗೆ ಇಲ್ಲ. ನಮ್ಮ ವ್ಯಾಪ್ತಿಯಲ್ಲಿ ಬರುತ್ತದೋ, ರೆವಿನ್ಯೂ ವ್ಯಾಪ್ತಿಯಲ್ಲಿ ಬರುತ್ತದೋ ಎನ್ನುವುದನ್ನು ಕಂಡುಹಿಡಿಯಲು ಸರ್ವೆ ಮಾಡಿಸಲಿಕ್ಕೆ ನಾನು ಈಗಾಗಲೇ ಸೂಚನೆಯನ್ನು ಕೊಟ್ಟಿದ್ದೇನೆ. ಸರ್ವೆ ಮಾಡಿಸಿದ ಮೇಲೆ ರೆವಿನ್ಯೂ ವ್ಯಾಪ್ತಿಯಲ್ಲಿ ಬರುವುದಾದರೆ ಅದನ್ನು ಮಂಜೂರು ಮಾಡುವುದಕ್ಕೆ ಏನೂ ತೊಂದರೆಯಿಲ್ಲ.

ಶ್ರೀ ಅರಗಜ್ಞಾನೇಂದ್ರ : ಇಲ್ಲಿ ಫಾರೆಸ್ಟ್ ಸರ್ವೇಯರ್ಸ್ ಇಲ್ಲದಿರುವುದರಿಂದ ಇದು ತೊಡಕಾಗಿದೆ. ರೆವಿನ್ಯೂ ಮತ್ತು ಫಾರೆಸ್ಟ್ ಇಲಾಖೆಯ ಸರ್ವೇಯರ್‌ಗಳು ಜಂಟಿ ಸರ್ವೆ ಮಾಡುವ ಪರಿಸ್ಥಿತಿ ಇದೆ. ರೆವಿನ್ಯೂ ಸರ್ವೇಯರ್ಸ್ ನೀವು ಬನ್ನಿ ಅಂದರೆ ಫಾರೆಸ್ಟ್ ಇಲಾಖೆಯಲ್ಲಿ ಸರ್ವೇಯರ್ಸ್ ಇಲ್ಲದಿರುವುದರಿಂದ ಇಂತಹ ಅನಾಹುತಗಳು ನಮ್ಮ ತಾಲ್ಲೂಕಿನಲ್ಲಿ ಸಾಕಷ್ಟು ಆಗುತ್ತಿವೆ. ದಯಮಾಡಿ ಫಾರೆಸ್ಟ್ ಸರ್ವೇಯರ್‌ಗಳನ್ನು ಇಲಾಖೆಗೆ ಒದಗಿಸುತ್ತೀರಾ? ಬಡವರ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಡಿ. ಮಂಜುನಾಥ್ : ಅದನ್ನು ಮಾಡುತ್ತೇನೆಂದು ಹೇಳಿದ್ದೇನೆ, ಮಾಡಿಸುತ್ತೇನೆ. ಸರ್ವೆ ಮಾಡಿಸಿದ ಮೇಲೆ ಅರಣ್ಯ ಜಮೀನು ಅಥವಾ ರೆವಿನ್ಯೂ ಜಮೀನು ಯಾವುದು ಎಂಬುದು ಸ್ಪಷ್ಟವಾಗಿ ತಿಳಿದುಕೊಂಡ ಮೇಲೆ ಅದನ್ನು ಸಾಲ್ವ್ ಮಾಡುವುದಕ್ಕೆ ಆಗುತ್ತದೆ.

ಮೈಸೂರಿನ ಕುಕ್ಕರಹಳ್ಳಿ ಕೆರೆಯನ್ನು ಪ್ರವಾಸಿ ತಾಣವನ್ನಾಗಿ ಪರಿವರ್ತಿಸುವುದು

372 - ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಪ್ರವಾಸೋದ್ಯಮ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಕುಕ್ಕರಹಳ್ಳಿ ಕೆರೆಯನ್ನು ಅಭಿವೃದ್ಧಿಪಡಿಸಿ ಪ್ರವಾಸಿ ತಾಣವನ್ನಾಗಿ ಪರಿವರ್ತಿಸುವ ಯೋಜನೆ ಏನಾದರೂ ಸರ್ಕಾರಕ್ಕೆ ಇದೆಯೇ?*

ಆ) *ಹಾಗಾದಲ್ಲಿ, ಉದ್ದೇಶಿತ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಹಾಗೂ ಉದ್ದೇಶಿತ ಯೋಜನೆಗಳ ಬಗ್ಗೆ ವಿವರ ನೀಡುವುದು?*

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, "ಸಂಸ್ಕೃತಿ ಅಂದರೆ ಅದು ಹೆಣ್ಣು, ಹೆಣ್ಣು ಅಂದರೆ ಅದು ಮನುಷ್ಯನ ಬಾಳಿನ ಕಣ್ಣು. ತಾವು ಕೊಟ್ಟಿರತಕ್ಕ ಉತ್ತರ ಹೊಟ್ಟೆ ಹುಣ್ಣು" ಎನ್ನುವಂತಹ ಮಟ್ಟಕ್ಕೆ ಆಗಿದೆ. ಏಕೆಂದರೆ ಕುವೆಂಪುರವರು ಕುಕ್ಕರಹಳ್ಳಿ ಕೆರೆಯನ್ನು ಪ್ರವಾಸಿಗರ